ಗಳು ಜಮೀನುಗಳನ್ನು ಎರಡು ನೂರು, ಮುನ್ನೂರು ರೂಪಾಯಿಗಳಿಗೆ ತೆಗೆದುಕೊಂಡು ಕಟ್ಟಡ ಗಳನ್ನು ಕಟ್ಟಿಸಿ ಎರಡು ವರ್ಷ, ಮೂರು ವರ್ಷ ಹೀಗೆ ಬಾಡಿಗೆಗೆ ಕೊಟ್ಟು ಅಲ್ಲಿ ಆರ್‌ಸಿಸಿ ಬಿಲ್ಡಿಂಗ್ ಗಳನ್ನು ಕಟ್ಟಿದ್ದಾರೆ. ಇದರ ಬಗ್ಗೆ ಪತ್ರಿಕೆಗಳಲ್ಲಿಯೂ ಸಹ ಬಂದಿದೆ. ಯಾವ ಯಾವ ಕಾರ್ಪೊರೇಟರ್ ಗಳು ಎಷ್ಟೆಷ್ಟು ಕೊಟ್ಟಿದ್ದಾರೆ ಎಂದು ನನ್ನ ಹತ್ತಿರ ವಿವರ ಇದೆ. ಇದರ ಬಗ್ಗೆ ಕೇಳಿದರೆ ಹಾರಿಕೆ ಉತ್ತರ ಕೊಡುತ್ತಾರೆ. ಈ ಬಗ್ಗೆ ಅನೇಕ ಜನರಿಗೆ ಕೂಡ ನನಗೆ ಫೋನ್ ಬಂದಿದೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಅವರು ಪ್ರಶ್ನೆಯನ್ನು ಕೇಳುವಾಗ ವಿನಂ ಬೇಕೂ ಎಂದು ಕೇಳಬೇಕು. ಅವರು ಪ್ರಶ್ನೆ ಕೇಳಿದ ಪ್ರಕಾರ ಉತ್ತರ ಹೇಳಿದೆ. ಅಲ್ಲಿ ಹಲವರು ಮನೆಗಳನ್ನು ಕಟ್ಟಿ, ನಿವೇಶನಗಳನ್ನು ತೆಗೆದುಕೊಂಡು ಹಣ ಮಾಡಿದ್ದಾರೆ ಇವೆಲ್ಲ ನನಗೆ ಬಂದಿರುವ ಮಾಹಿತಿ ಪ್ರಕಾರ ಯಾವುದೂ ಕಾರ್ಪೊರೇಟರ್ ಹೆಸರಿನಲ್ಲಿ ಇಲ್ಲ. ಅವರು ಈ ಬಗ್ಗೆ ತಮ್ಮಲ್ಲಿರುವ ವಿವರಗಳನ್ನು ಕೊಟ್ಟರೆ ಅವುಗಳನ್ನು ಪರಿಶೀಲನೆ ಮಾಡಿ ತನಿಖೆ ಮಾಡಿಸುತ್ತೇನೆ.

ಶ್ರೀ ಬಿ. ಎ. ಉಪ್ಪಿನ್.—ಹಾರಪಗೇರಿ, ಎಚ್. ಬಿ. ಹೂಗಾರ್, ವೀರಣ್ಣ ದೇಸಾಯಿ, ಬಸವರಾಜಸೇರಿ, ಶಾಮ ಆಂಟೋಲೆ, ಎ. ಜಿ. ಮುಧೋಳ ಹೀಗೆ ಅನೇಕ ಕಾರ್ಪೊರೇಟರ್ಸ್ ಹೆಸರು ಗಳು ನನ್ನ ಬಳಿ ಇವೆ. ಈ ಕಾರ್ಪೊರೇಟರ್ಸ್ ಹಾಗೂ ಇವರ ಸಂಬಂಧೀಕರು ಅಲ್ಲಿಯ ನಗರಪಾಲಿಕೆಗೆ ಸೇರಿದ ಖಾಲಿ ನಿವೇಶನಗಳನ್ನು ಕಡಿಮೆ ಬೆಲೆಗೆ ಪಡೆದಿದ್ದಾರೆ. ಈ ಖಾಲಿ ನಿವೇಶನಗಳನ್ನು ಹರಾಜು ಹಾಕಿದರೆ ಅಲ್ಲಿನ ಮಹಾನಗರಪಾಲಿಕೆಗೆ ಕೋಟ್ಯಾಂತರ ರೂಪಾಯಿಗಳಷ್ಟು ಆದಾಯ ಬರುತ್ತದೆ ಆದರೆ ಇವರುಗಳು ಕಡಿಮೆ ಬೆಲೆಗೆ ಪಡೆದು ಕಟ್ಟಡಗಳನ್ನು ಕಟ್ಟಿಸಿದ್ದಾರೆ. ೨-೩ ತಿಂಗಳ ಹಿಂದೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ನೌಕರರೊಬ್ಬರು ಸತ್ಯಾಗ್ರ ಅವರ ಜಾಗದಲ್ಲಿ ಅವರ ಮಗನಿಗೆ ಮಾನವೀಯತೆ ದೃಷ್ಟಿಯಿಂದ ಎರಡನೇ ದರ್ಜೆ ಗುಮಾಸ್ತರ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಕೇಳಿಕೊಂಡಾಗ ನಗರಪಾಲಿಕೆಯವರು ಕೆಲಸಕ್ಕೆ ತೆಗೆದುಕೊಂಡರೆ ಒಂದು ಸಾವಿರ ರೂಪಾಯಿಗಳ ಪಗಾರ ಕೊಡಲು ತಮ್ಮಲ್ಲಿ ಹಣ ಇಲ್ಲವೆಂದು ಹೇಳಿದರು. ಆದರೆ ಕೋಟ್ಯಾಂತರ ರೂಪಾಯಿ ಗಳಷ್ಟು ಬೆಲೆ ಬಾಳುವ ನಿವೇಶನಗಳ ಬಗ್ಗೆ ಈ ರೀತಿ ಅವ್ಯವಹಾರ ನಡೆದಿರುವುದು ಸರಿಯೇ ? ಈ ಬಗ್ಗೆ ಸಿ. ಓ. ಡಿ. ತನಿಖೆ ಆಗಬೇಕೆಂಬುದು ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಗೆ ಸೇರಿದ ಜನತೆಯ ಅಭಿಪ್ರಾಯವಾಗಿದೆ. ಆದ್ದರಿಂದ ಇದಕ್ಕೆ ಮಾನ್ಯ ಮಂತ್ರಿಗಳು ಒಪ್ಪುತ್ತಾರೆಯೇ ?

ಶ್ರೀ ಎಂ. ಚಂದ್ರಶೇಖರ್.—ನಾನು ಈಗಾಗಲೇ ಉತ್ತರ ಹೇಳಿದ್ದೇನೆ. ಅವರು ಇಲ್ಲಿ ಕೇಳಿರುವ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಇದು ಬಿಟ್ಟು ಬೇರೆ ಏನಾದರೂ ಇಲ್ಲಿ ನಡೆದಿದ್ದರೆ ತನಿಖೆ ಮಾಡಿಸುತ್ತೇನೆ.

ಶ್ರೀ ಬಿ. ಎ. ಉಪ್ಪಿನ್.—ಇದು ಕೇವಲ ಒಬ್ಬರ ಪ್ರಶ್ನೆಯಲ್ಲ. ಇದರಲ್ಲಿ ಜನತಾ ಪಕ್ಷದವರು ಇದ್ದಾರೆ, ಕಾಂಗ್ರೆಸ್ ಪಕ್ಷದವರು ಇದ್ದಾರೆ, ಬಿ ಜೆ. ಪಿ. ಪಕ್ಷದವರು ಇದ್ದಾರೆ. ಆದ್ದರಿಂದ ಈ ಬಗ್ಗೆ ಯೋಗ್ಯ ತನಿಖೆ ಆಗಲೇ ಬೇಕು. ಈ ಬಗ್ಗೆ ತಾವು ಸರಿಯಾದ ಉತ್ತರ ಕೊಡದಿದ್ದರೆ ಹೇಗೆ ?

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಹೇಳಿದಂತೆ ತಾವು ಈ ಬಗ್ಗೆ ವಿವರವಾಗಿ ಬರದುಕೊಡಿ. ಅವರು ತನಿಖೆ ಮಾಡಿಸುತ್ತಾರೆ.

ಮನೆಗಳ ಹಂಚಿಕೆ ಬಗ್ಗೆ

೧೬೬೬. ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬಿರಾದ್).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿರಾದ್ ಕ್ಷೇತ್ರದಲ್ಲಿ ಸರ್ಕಾರದಿಂದ ಆರ್ಥಿಕ ದುರ್ಬಲ ವರ್ಗದವರಿಗೆ ನೀಡಲಾದ ಮನೆಗಳ ಸಂಖ್ಯೆ ಎಷ್ಟು ?

ಆ) ಸದರಿ ಕ್ಷೇತ್ರದಲ್ಲಿ ಒಡ ಜನತೆಗೆ ನೀಡಲಾದ ಜನತಾ ಮನೆಗಳ ಸಂಖ್ಯೆ ಎಷ್ಟು ?

ಇ) ಕಡಿಮೆ ಬೆಲೆ ಹಾಗೂ ಜನತಾ ಮನೆ ಳಿಗಾಗಿ ಜಂಟ್ ಸೀಟನ್ನು (ಹೊದಿಸಲು) ಖರೀದಿಸಲು ಏರ್ಪಾಡು ಮಾಡಿದ ಹಣವೆಷ್ಟು ಹಾಗೂ ಯಾರಿಂದ ಅವನ್ನು ಖರೀದಿಸಲಾಗಿದೆ ?

ಈ) ಎಷ್ಟು ಮನೆಗಳಲ್ಲಿ ಜನ ವಾಸಿಸುತ್ತಿರುವರು ಹಾಗೂ ಖಾಲಿ ಇರುವ ಮನೆಗಳ ಸಂಖ್ಯೆ ಎಷ್ಟು ?

ಶ್ರೀ ಮೊಹಮ್ಮದ್ ಮೊಯೀನುದ್ದೀನ್ (ವಸತಿ ರಾಜ್ಯ ಸಚಿವರು).—

ಅ) ೯೯೧

ಆ) ೪೫೦೬

ಇ) ೧) ಒಟ್ಟು ರೂ. ೭,೧೬,೧೨೯–೦೦ ಗಳು ಖರ್ಚು ಮಾಡಲಾಗಿದೆ.

೨) ವರ್ಷ	ಸಂಖ್ಯೆ	ಯಾರಿಂದ ಖರೀದಿಸಲಾಗಿದೆ
೧೯೮೨	೭೪೨	ಬಾಲಾಜಿ ಎಂಟರ್‌ಪ್ರೈಸಸ್, ಬೀದರ್
೧೯೮೩	೫೦೨	– ಡಿಟೋ –
೧೯೮೪	೫೬೦	ಎಸ್. ಬಿ. ಮಾರ್ಕೆಟಿಂಗ್ ಕಾರ್ಪೋರೇಷನ್, ಗುಲ್ಬರ್ಗಾ
೧೯೮೫	೫೪೬	ಇಂಡಿಯನ್ ಮೆಟಲ್ ವರ್ಕ್ಸ್, ಗುಲ್ಬರ್ಗಾ
೧೯೮೬	೫೬೪	– ಡಿಟೋ –
೧೯೮೭		
(ಬ್ಯಾಂಕ್ ಸಹಾಯಕ ಮನೆಗಳು)	೭೩೫	ಕರ್ನಾಟಕ ಸಣ್ಣ ಉದ್ದಿಮೆ ಅಭಿವೃದ್ಧಿ ನಿಗಮ ನಿ. ಬೆಂಗಳೂರು
೧೯೮೭		
(ಜನತಾ ಮನೆಗಳು)	೧೯೬	– ಡಿಟೋ –

ಈ) ೧) ಜನತಾ ಮನೆಗಳು

೧) ಪೂರ್ತಿಗೊಳಿಸಿದ ಮನೆಗಳು	–	೩೭೪೬
೨) ವಾಸವಾಗಿರುವ ಮನೆಗಳು	–	೩೨೦೪
೩) ಖಾಲಿ ಇದ್ದ ಹಾಗೂ ದುರಸ್ತಿಯಲ್ಲಿದ್ದ ಮನೆಗಳ ಸಂಖ್ಯೆ	–	೫೪೨

೨) ಕಡಿಮೆ ವೆಚ್ಚದ ಮನೆಗಳು

೧) ಪೂರ್ತಿಯಾದ ಮನೆಗಳು	–	೬೫೪
೨) ವಾಸವಾಗಿರುವ ಮನೆಗಳ ಸಂಖ್ಯೆ	–	೬೫೪

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಔರಾದ್ ಕ್ಷೇತ್ರದಲ್ಲಿ ಕಟ್ಟಿರುವಂತಹ ಒಟ್ಟು ಮನೆಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ೪೫೦೬ ಎಂದು ಹೇಳಿದ್ದಾರೆ. ಇದರಲ್ಲಿ ಎಷ್ಟು ಮನೆಗಳನ್ನು ಹಂಚಲಾಗಿದೆ ಎಂದು ಕೇಳಿದ್ದಕ್ಕೆ ೯೯೧ ಎಂದು ಹೇಳಿದ್ದಾರೆ. ಹಾಗಿದ್ದರೆ ಇನ್ನುಳಿದ ಮನೆಗಳು ಏನಾದವು? ಉಳಿದ ಮನೆಗಳು ಏನಾದವು ಕಳವು ಆದವೇ ಹೇಗೆ ? ಇದಕ್ಕೆ ಉತ್ತರ ಬೇಕು ? ಮತ್ತೆ ಈ ಹಿಂದೆ ನಾನು ಎಲ್ಲೆಲ್ಲಿ ಮನೆಗಳನ್ನು ಕಟ್ಟಿಸಲಾಗಿದೆ ಎಂದು ಪ್ರಶ್ನೆ ಕೇಳಿದ್ದಕ್ಕೆ ಕೆಲವು ಮನೆಗಳನ್ನು ಸಾವಳಗಿ ತಾಂಡದಲ್ಲಿ ಕಟ್ಟಿಸಲಾಗಿದೆ ಎಂದೂ ಉತ್ತರ ಕೊಟ್ಟಿದ್ದರು. ಆದರೆ ಆ ಹೆಸರಿನ ತಾಂಡದಲ್ಲಿ ಮನೆಗಳನ್ನೇ ಕಟ್ಟಿಸಿಲ್ಲ. ಆದರೆ ಖರ್ಚು ಮಾತ್ರ ಆಗಿದೆ. ಇಂತಹ ಪ್ರಕರಣಗಳು ಎಲ್ಲೆಲ್ಲಿ ನಡೆದಿದೆ ಎಂದು ಪ್ರಶ್ನೆ ಕೇಳಿದ್ದೆ ಆದರೆ ಅದಕ್ಕೆ ಉತ್ತರ ಇಲ್ಲ. ನಾನು ಇಂತಹ ಬೇನಾಮಿ ಮನೆಗಳ ಲೆಕ್ಕವನ್ನು ಕೇಳಿದ್ದೆ. ಅದಕ್ಕೂ ಸಹ ಇಲ್ಲಿ ಉತ್ತರ ಇಲ್ಲ. ಮತ್ತೆ ೭ ಲಕ್ಷ ರೂಪಾಯಿಗಳಷ್ಟು ಬೆಲೆ ಬಾಳುವಂತಹ ಜಿಂಕ್

ಶೀಟ್‌ಗಳನ್ನು ಯಾರಿಂದ ಕೊಂಡುಕೊಳ್ಳಲಾಯಿತು ಎಂಬ ಬಗ್ಗೆ ಇಲ್ಲಿ ಕೊಟ್ಟಿರುವ ಸಂಸ್ಥೆಗಳ ಹೆಸರುಗಳನ್ನು ನೋಡಿದಾಗ, ಈ ಹೆಸರಿನ ಸಂಸ್ಥೆಗಳೇ ಅಲ್ಲಿ ಇಲ್ಲ. ಈ ಹೆಸರುಗಳು ಇರುವ ಬೋರ್ಡುಗಳು ಮಾತ್ರ ಅಲ್ಲಿವೆಯೇ ಎಂಬ ಬಗ್ಗೆ ನನಗೆ ವಿಚಿತ ಮಾಹಿತಿ ಬೇಕಾಗಿದೆ.

ಅಧ್ಯಕ್ಷರು.—ತಾವು ಭಾಷಣ ಮಾಡಬೇಡಿ, ಪ್ರಶ್ನೆ ಕೇಳಿ ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಅದಕ್ಕೆ ಇದರಲ್ಲಿ ೭ ಲಕ್ಷ ರೂಪಾಯಿಗಳು ಖರ್ಚಾಗಿದೆ ಎಂದು ಹೇಳ್ತಾ ಇದ್ದಾರೆ, ಅದರಲ್ಲಿ ಅರ್ಧಕ್ಕಿಂತ ಹೆಚ್ಚು ಬಿಡಿಓ ಮನೆಗಳ ಮೇಲೆ ಜಿಂಕ್ ಶೀಟ್ಸ್ ಇದೆ. ಅವರ ಮನೆ ಮೇಲೆ ಎಷ್ಟಿದೆ ಎಂದು ಏನಾದರೂ ಮಾಹಿತಿ ಇದೆಯೇ ಇದರಲ್ಲಿ ಅಥವಾ ಅವನ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ, ಅದರ ಬಗ್ಗೆ ಸರಿಯಾದ ಮಾಹಿತಿ ಕೊಡಬೇಕಾಗಿದೆ.

ಶ್ರೀ ಮಹಮ್ಮದ್ ಮೋಹಿನುದ್ದೀನ್.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರ ನೀಡಲಾಗಿದೆ ಸ್ವಾಮಿ. ಬೇನಾಮಿ ಎಷ್ಟಾಗಿದೆ. ಏನಾಗಿದೆ ಎಂದು ಅವರು ಪ್ರಶ್ನೆ ಕೇಳಿಲ್ಲ. ಆದ್ದರಿಂದ ಅದಕ್ಕೆ ಉತ್ತರ ಇಲ್ಲ, ಅಂಥಾದ್ದು ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ. ಹಾಗೆಯೇ ೪೫೦೬ ಮನೆಗಳಲ್ಲಿ ೩೭೧೬ ಮನೆಗಳು ಕಂಪ್ಲೀಟಾಗಿದೆ. ೩೨೦೪ ಮನೆಗಳು ಆಕ್ಯುಪೈ ಆಗಿದೆ. ಉಳಿದ ಪೈಕಿ ೧೬೩೩ ಪ್ರಾಪರ್ ಬೆನಿಫಿಷರೀಸ್ ಆಕ್ಯುಪೈ ಆಗಿದೆ ಬ್ಯಾಲೆನ್ಸ್ ೧೫೬೪ ಇದ್ದದ್ದು ಪ್ರಾಪರ್ ಬೆನಿಫಿಷರೀಸ್ ಆಕ್ಯುಪೈ ಮಾಡಿಲ್ಲ ಎಂದು ಅದರ ಮೇಲೆ ಲೋಕಾಯುಕ್ತಕ್ಕೆ ರೆಫರ್ ಮಾಡಲಾಗಿದೆ. ಲೋಕಾಯುಕ್ತ ದಿಂದ ಫೈಂಡಿಂಗ್ಸ್ ಬಂದನಂತರ ಬೇಕಾದರೆ ಸನ್ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಯಾವ ಯಾವ ವಿಷಯದ ಬಗ್ಗೆ ಲೋಕಾಯುಕ್ತಕ್ಕೆ ಬರೆದಿದ್ದೀರಿ ಮತ್ತು ಲೋಕಾಯುಕ್ತಕ್ಕೆ ಬರೆಯುವಾಗ ೫೪೬ ಮನೆಗಳು ದುಸ್ಥಿತಿಯಲ್ಲಿವೆ ಎಂದು ಹೇಳಿದ್ದೀರಿ ಈ ಮನೆಗಳು ದುಸ್ಥಿತಿಯಲ್ಲಿ ಏಕೆ ಬಂತು, ಇದಕ್ಕೆ ಕಾರಣಗಳೇನು ? ಲೋಕಾಯುಕ್ತಕ್ಕೆ ಏನು ಬರೆದಿದ್ದೀರಿ ಎನ್ನುವುದರ ಬಗ್ಗೆ ಖಚಿತವಾದಂಥ ಮಾಹಿತಿ ಕೊಡಿ.

ಶ್ರೀ ಮಹಮ್ಮದ್ ಮೊಯಿನುದ್ದೀನ್.—ಲೋಕಾಯುಕ್ತಕ್ಕೆ ನಾವು ರೆಫರ್ ಮಾಡಿದ್ದೇವೆ. ಬೈಲಪ್ಪ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ ಆಫ್ ಸಂತಾಪುರ, ಅವರ ಕಾಲದಲ್ಲಿ ಆಗಿರುವ ಇರೆಗ್ಯುಲಾರಿಟೀಸ್ ಎಷ್ಟು ಜಿಂಕ್ ಶೀಟ್ಸ್ ಕೊಂಡುಕೊಂಡಿದ್ದಾರೆ ಅವೆಲ್ಲಾ ಮಾಹಿತಿ ಬಗ್ಗೆ ಲೋಕಾಯುಕ್ತಕ್ಕೆ ರೆಫರ್ ಮಾಡಲಾಗಿದೆ. ಲೋಕಾಯುಕ್ತದವರು ಫೈಂಡಿಂಗ್ಸ್ ಕೊಟ್ಟನಂತರ ಅದರ ಮೇಲೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಸಂಗಪ್ಪ ತಿಂದು ಹಾಕಿದ್ದು ಬೇಕಾದಷ್ಟು ಇದೆ. ಸಂಗಪ್ಪನ ಮೇಲೆ ಏನೂ ಮಾಡಿಲ್ಲ. ಅದಕ್ಕೆ ಸಂಗಪ್ಪನ ಮೇಲೆ ಕೂಡ ಲೋಕಾಯುಕ್ತಕ್ಕೆ ಬರೆಯುತ್ತೀರಾ? ಸಂಗಪ್ಪನ ಮೇಲೆ ಲೋಕಾಯುಕ್ತಕ್ಕೆ ಬರೆದು ಎಷ್ಟು ಪಂಚೆಗಳು ಮಾಡಿದೆ, ಅವನ ಮನೆಗಳ ಮೇಲೆ ಎಷ್ಟು ಜಿಂಕ್‌ಶೀಟ್ಸ್ ಇದೆ ಎಂದು ಪರಿಶೀಲಿಸಿದ್ದೀರಾ ? ಲೋಕಾಯುಕ್ತಕ್ಕೆ ಬರೆಯುತ್ತೀರಾ ಎನ್ನುವುದನ್ನು ಖಚಿತವಾಗಿ ಹೇಳಬೇಕು.

ಶ್ರೀ ಮಹಮ್ಮದ್ ಮೋಯಿನುದ್ದೀನ್.—ಮಾನ್ಯ ಸದಸ್ಯರು ಈಗ ಇನ್‌ಫರ್ಮೇಷನ್ ಕೊಟ್ಟಿದ್ದಾರೆ. ಆ ಇನ್‌ಫರ್ಮೇಷನ್ ಪ್ರಕಾರ ಸೂಕ್ತ ಕ್ರಮ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡಲಾಗುವುದು.

ನಂಜನಗೂಡಿನಲ್ಲಿ ಇರುವ ಕೊಳವೆಬಾವಿಗಳು

೧೫೫೩. **ಶ್ರೀ ಡಿ. ಟಿ. ಜಯಕುಮಾರ್** (ನಂಜನಗೂಡು).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ವಕ್ಫ್ ಮತ್ತು ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫ರ ಮುನ್ನ ನಂಜನಗೂಡು ತಾಲ್ಲೂಕಿನಲ್ಲಿ ಎಷ್ಟು ಕೊಳವೆ ಬಾವಿಗಳಿದ್ದವು ?

ಆ) ೧೯೮೫–೮೫, ೧೯೮೫–೮೬, ೧೯೮೬–೮೭ ಮತ್ತು ೧೯೮೭–೮೮ನೇ ಸಾಲಿನಲ್ಲಿ ನಂಜನಗೂಡು ತಾಲ್ಲೂಕಿನಲ್ಲಿ ಕೊರೆಸಿರುವ ಬಾವಿಗಳ ಸಂಖ್ಯೆ ಎಷ್ಟು ?